2014 ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು,

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ.

ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು)

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ. ಶ್ರೀಮಾನ್ ರೇವಣ್ಣನವರೆ, ತಾವು ಸಂಕ್ಷಿಪ್ತವಾಗಿ ಹೇಳಿ, ಭಾಷಣ ಮಾಡಬೇಡಿ.

ಗಮನ ಸೆಳೆಯುವ ಸೂಚನೆಗಳು

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಹೊಳೇನರಸೀಪುರ ತಾಲ್ಲೂಕು, ಸುಣ್ಣಕಲ್ಲು ಗ್ರಾಮದಲ್ಲಿ ಸರ್ವೆ ನಂಬರ್ 8/PI ಇವುಗಳಲ್ಲಿ 16 ಎಕರೆ 20 ಗಂಟೆ Village Accountant ಸ್ವಂತ ತಾಯಿಯ ಹೆಸರಿನಲ್ಲಿ ..

ಅಧ್ಯಕ್ಷರು :– ನೀವು ಮೊದಲು ಗಮನ ಸೆಳೆಯಿರಿ, ಸುಮ್ಮನೆ ಭಾಷಣ ಮಾಡಬಾರದು.

ಶ್ರೀ ಹೆಚ್.ಡಿ. ರೇವಣ್ಣ : ಬೇನಾಮಿ ಹೆಸರಿನಲ್ಲಿ ಮಾಡಿ ಸರ್ಕಾರಕ್ಕೆ ಒಂದೆರಡು ಕೋಟಿ ರೂಪಾಯಿ ಬರುವಂತಹ ಆಸ್ತಿಯನ್ನು ಕೇವಲ 30 ಲಕ್ಷ ರೂಪಾಯಿಗೆ ಬರೆಯಿಸಿದ್ದಾರೆ. ಅದು ಕಾನೂನುಬಾಹಿರವಾಗಿದೆ.

ಅಧ್ಯಕ್ಷರು : ರೇವಣ್ಣನವರೆ, ಯಾವಾಗಲೂ ಕೂಡ ಮೊದಲು ಸಚಿವರ ಗಮನ ಸೆಳೆಯಬೇಕು.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನೂ ಅದನ್ನಾದರೂ ಹೇಳಬೇಕಲ್ಲ.

ಅಧ್ಯಕ್ಷರು :– ನೀವು ಅದನ್ನು ಓದಿ ಹೇಳಿ, ಅದು, ಯಾವ ಹಳ್ಳಿ, ಎಂತಹ ಕಡೆ ನಡೆದಿದೆ ಎಂದು ನಿರ್ದಿಷ್ಟವಾಗಿ ಹೇಳದಿದ್ದರೆ ಹೇಗಾಗುತ್ತದೆ?

ವಿಷಯ:– ಹೊಳೇನರಸೀಪುರ ತಾಲ್ಲೂಕು ಕಸಬಾ ಹೋಬಳಿ ದೊಡ್ಡ ಕಾಡನೂರು ವೃತ್ತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗ್ರಾಮಲೆಕ್ಕಾಧಿಕಾರಿ ಭೂ ದಾಖಲೆಗಳನ್ನು ತಿದ್ದಿ ಕಾನೂನು ಬಾಹಿರವಾಗಿ ಬೇನಾಮಿ ಹೆಸರಿನಲ್ಲಿ ಸುಣ್ಣದಕಲ್ಲು ಗ್ರಾಮದಲ್ಲಿ ಜಮೀನುಗಳನ್ನು ಅಕ್ರಮವಾಗಿ ಖರೀದಿಸಿರುವ ಬಗ್ಗೆ

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಹೊಳೇನರಸೀಪುರ ತಾಲ್ಲೂಕು ಕಸಬಾ ಹೋಬಳಿ ದೊಡ್ಡಕಾಡನೂರು ವೃತ್ತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗ್ರಾಮಲೆಕ್ಕಾಧಿಕಾರಿ ಭೂ ದಾಖಲೆಗಳನ್ನು ತಿದ್ದಿ ಕಾನೂನು ಬಾಹಿರವಾಗಿ ಬೇನಾಮಿ ಹೆಸರಿನಲ್ಲಿ ಸುಣ್ಣಕಲ್ಲು ಗ್ರಾಮದಲ್ಲಿ ಜಮೀನುಗಳನ್ನು ಅಕ್ರಮವಾಗಿ ಖರೀದಿಸಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿ, ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಒಪ್ಪಿಗೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಸುಣ್ಣದಕಲ್ಲು ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ ಇಲ್ಲಿನ ಸರ್ವೆ ನಂಬರ್ 8/ P1 , 8 / P2 , 8 / P3 , 8 / P4 ರಲ್ಲಿ, ಒಟ್ಟು 16 ಎಕರೆ 20 ಗುಂಟೆ ಸರ್ಕಾರಿ ಗೋಮಾಳ ಜಮೀನನ್ನು ಅಕ್ರಮ ದಾಖಲಾತಿಗಳನ್ನು ಸೃಷ್ಟಿಸಿ, ಮಾಡಿರುವ ಖಾಸಗಿಯವರಿಗೆ ಮಂಜೂರು ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಬಿ.ಎಸ್. ಪುಟ್ಟಶೆಟ್ಟಿ, ಹಿಂದಿನ ಶಿರಸ್ತೇದಾರ್(ಹಾಲಿ ತಹಶೀಲ್ದಾರ್ ಗೇಡ್–2, ಸಕಲೇಶಪುರ) ಶ್ರೀ.ಕೆ.ಆರ್,ನಾಗರಾಜೇಗೌಡ, ಹಿಂದಿನ ರಾಜಸ್ವ ನಿರೀಕ್ಷಕರು(ಹಾಲಿ ಪ್ರಥಮ ದರ್ಜೆ ಸಹಾಯಕ, ಉಪ ವಿಭಾಗಾಧಿಕಾರಿ ಕಛೇರಿ, ಹಾಸನ) ಶ್ರೀ ಆರ್,ಪೃಥ್ವಿರಾಜ್ ಹಿಂದಿನ ಗ್ರಾಮ ಲೆಕ್ಕಿಗರು (ಹಾಲಿ ಗ್ರಾಮ ಲೆಕ್ಕಿಗರು, ದೊಡ್ಡಕಾಡನೂರು ವೃತ್ತ) ಮತ್ತು ಶ್ರೀ ಕೆ.ನಟರಾಜ್, ಅಂದಿನ ಗ್ರಾಮ ಲೆಕ್ಕಿಗರು

(ಭೂಮಿ) (ಹಾಲಿ ಬರಾಳು ವೃತ್ತ, ಚನ್ನರಾಯಪಟ್ಟಣ ತಾಲ್ಲೂಕು) ಇವರುಗಳು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ, ಶ್ರೀ ಬಿ.ಎಸ್.ಪುಟ್ಟಶೆಟ್ಟಿ ಇವರನ್ನು ದಿನಾಂಕ 30.4. 2011ರಂದು ಇನ್ನುಳಿದ ನೌಕರರುಗಳಾದ ಶ್ರೀ ಕೆ.ಆರ್.ನಾಗರಾಜೇಗೌಡ, ರಾಜಸ್ವ ನಿರೀಕ್ಷಕರು, ಶ್ರೀ ಪೃಥ್ವಿರಾಜ್, ಗ್ರಾಮ ಲೆಕ್ಕಿಗರು ಮತ್ತು ಶ್ರೀ ಕೆ.ನಟರಾಜ್, ಗ್ರಾಮ ಲೆಕ್ಕಿಗ (ಭೂಮಿ) ಇವರುಗಳನ್ನು ದಿನಾಂಕ 4.2.2011ರಂದು ಅಮಾನತ್ತಿನಲ್ಲಿರಿಸಿ ಆದೇಶ ಹೊರಡಿಸಲಾಗಿತ್ತು, ತದನಂತರ, ಶ್ರೀ ಪುಟ್ಟಶೆಟ್ಟಿ, ಹಿಂದಿನ ಶಿರಸ್ತೇದಾರ ಇವರ ಅಮಾನತ್ತನ್ನು 21.7.2012ರಂದು ಮತ್ತು ಇನ್ನುಳಿದ 3 ನೌಕರರುಗಳ ವಿಚಾರಣೆಯನ್ನು ಬಾಕಿ ಇರಿಸಿ, ಅಮಾನತ್ತನ್ನು ತೆರವುಗೊಳಿಸಿ, ದಿನಾಂಕ 19.9.2011ರಂದು ಆದೇಶ ಹೊರಡಿಸಲಾಗಿದೆ. ಮೇಲ್ಕಂಡ ಎಲ್ಲಾ ನಾಲ್ಕು ಜನ ನೌಕರರುಗಳ ವಿರುದ್ಧ ಭಾರತ ದಂಡ ಸಂಹಿತೆ ಕಲಂ 409, 420, 471, 466 ಮತ್ತು 468 ಹಾಗೂ ಕರ್ನಾಟಕ ಭೂ ಕಂದಾಯ, ಕಾಯ್ದೆ 1964ರ ಕಲಂ 192–ಎ ಅಡಿಯಲ್ಲಿ ಸಿ.ಜೆ.ಎಂ. ನ್ಯಾಯಾಲಯ, ಹೊಳೆನರಸೀಪುರ, ಇಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿದ್ದು, ಪ್ರಸ್ತುತ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಸದರಿ ನೌಕರರ ವಿರುದ್ಧದ ಕ್ರಿಮಿನಲ್ ಮೊಕದ್ದಮೆ ದಾಖಲಾತಿ ಸಂಬಂಧದಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರಿಂದಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರಲಿಲ್ಲ. ಮೇಲ್ಕಂಡ ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಪೋಲೀಸರ ವಶದಲ್ಲಿದ್ದ ಮೂಲ ದಾಖಲಾತಿಗಳನ್ನು ಪರಿಶೀಲಿಸಿ, ದೃಡೀಕರಿಸಿಕೊಂಡು, ದೋಷಾರೋಪಣಾ ಪಟ್ಟಿಯನ್ನು ತಯಾರಿಸಲಾಗಿದೆ. ಮೇಲಂಡ ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ಪ್ರಕಾರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ನಿಮಿಷಗಳಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ಚರ್ಚೆ ಇಲ್ಲ..

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ಒಂದೆರಡು ನಿಮಿಷಗಳಲ್ಲಿ ಹೇಳುತ್ತೇನೆ,

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಚರ್ಚೆಗೆ ಅವಕಾಶವಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕೆಲವು ವಿಷಯಗಳು ಬಿಟ್ಟು ಹೋಗಿರುವುದನ್ನು ಹೇಳಬೇಕಾಗುತ್ತದೆ, ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕಾಗುತ್ತದೆ, ಸಂಬಂಧಪಟ್ಟ ದಾಖಲೆಗಳನ್ನು ಕಳುಹಿಸಿ ಕೊಡುತ್ತೇನೆ. ಹೊಳೆನರಸೀಪುರ ತಾಲ್ಲೂಕಿನ ಸುತ್ತ–ಮುತ್ತ ಲ್ಯಾಂಡ್‌ಗಳನ್ನು ತೆಗೆದುಕೊಂಡು, ಸೈಟ್‌ಗಳನ್ನು ಮಾಡುವುದು. ಇದನ್ನು ಬೇನಾಮಿ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದಾರೆ..

ಅಧ್ಯಕ್ಷರು : ತಾವು ಸಂಬಂಧಪಟ್ಟ ದಾಖಲೆಗಳನ್ನು ಮಾನ್ಯ ಮಂತ್ರಿಯವರಿಗೆ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಕೊಡುತ್ತೇನೆ, ಅವರ ಮೇಲೆ ತನಿಖೆ ಮಾಡಿ, ಮತ್ತೆ ಅವರನ್ನೆ ಆಲ್ಲಿಟ್ಟಿದ್ದೀರಿ ಅಲ್ಲಿನ ಕಚೇರಿಯಲ್ಲಿ ಸರ್ಕಾರಿ ಕಡತಗಳು ಇವೆಯೇ ಎಂಬುದನ್ನು ಕೇಳಿ, ದಯಮಾಡಿ ಕೂಡಲೇ ಅವರನ್ನು ಅಲ್ಲಿಂದ ತೆಗೆದು, enquiry ಮಾಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೆ, ಅವರನ್ನು ಅಲ್ಲಿಂದ ತೆಗೆಯಿರಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಪೃಥ್ವಿರಾಜ್ ಎನ್ನುವವನು ಅಲ್ಲೇ ಬೇರೆ ವೃತ್ತದಲ್ಲಿದ್ದಾನೆ. ಅವನನ್ನು ಬೇರೆ ಕಡೆಗೆ ಹಾಕಿ ವಿಚಾರಣೆ ಮಾಡಿಸುತ್ತೇನೆ

ಅಧ್ಯಕ್ಷರು : ಆ ತಾಲ್ಲೂಕಿನಿಂದ ಹೊರಗೆ ಹಾಕಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಆಯಿತು, ತಾವು ಈಗ ಏನು ಆದೇಶವನ್ನು ಕೊಟ್ಟಿದ್ದೀರಿ, ಆದರಂತೆ ಅವನನ್ನು ತಾಲ್ಲೂಕಿನಿಂದ ಹೊರಗಡೆಗೆ

ಹಾಕೋಣ, ಮತ್ತೆ ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : Ok , ಇನ್ನು ಶ್ರೀ ಎನ್. ಚಲುವರಾಯಸ್ವಾಮಿಯವರು ಇಲ್ಲಿ ಮಾನ್ಯ ಹೆಚ್.ಡಿ.ರೇವಣ್ಣನವರೆ ಕೇಳಿ.

ಆ ವಿಷಯ : ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ ಸಮುದಾಯ ಆಸ್ಪತ್ರೆ ಮತ್ತು ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ,

ಶ್ರೀ ಹೆಚ್.ಡಿ.ರೇವಣ್ಣ: (ಹೊಳೆನರಸೀಪುರ) ಮಾನ್ಯ ಅಧ್ಯಕ್ಷರೆ , ಒಬ್ಬ ಮಾಜಿ ಪ್ರಧಾನಮಂತ್ರಿಯ ಊರಲ್ಲಿ ಸಮುದಾಯ ಆಸ್ಪತೆ ಇಲ್ಲ. ನನ್ನ ಕ್ಷೇತ್ರದಲ್ಲಿಯೂ ಸಮುದಾಯ ಆಸ್ಪತ್ರೆ ಇಲ್ಲ. ಮತ್ತೆ ಐದು ಜನ ಡಾಕ್ಟರ್‌ಗಳು ಇಲ್ಲ, ಇಲ್ಲಿ ಕಳೆದ ಎರಡು ವರ್ಷಗಳಿಂದ ಡಾಕ್ಟರ್‌ಗಳಿಲ್ಲ. ಈ ರೀತಿ ಆದರೆ ಆಸ್ಪತ್ರೆಯ ಬಾಗಿಲು ಮುಚ್ಚಿ.

ಅಧ್ಯಕ್ಷರು : ಈ ಪರಿಸ್ಥಿತಿ ಇಡೀ ರಾಜ್ಯದಲ್ಲಿದೆ, ನನ್ನ ಕ್ಷೇತ್ರದ್ದು ಕತೆಯನ್ನು ಕೇಳಿದರೆ ಅಷ್ಟೆ, ನಾನು ನನ್ನ ತಾಲ್ಲೂಕಿನ ಬಗ್ಗೆ ಮಂತ್ರಿಗಳಿಗೆ ಹೇಳಿಯೂ ಆಯಿತು, ಪತ್ರವನ್ನು ಬರೆದು ಆಯಿತು, ಏನೂ ಆಗಲಿಲ್ಲ. ಮಾನ್ಯ ಸಚಿವರೇ, ಉತ್ತರ ಹೇಳಿ,

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಪಡುವಲಹಿಪ್ಪೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ 4 ತಜ್ಞ ವೈದ್ಯರು ಹಾಗೂ ಒಂದು ದಂತ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ತಜ್ಞರ ಹುದ್ದೆಗಳು ಖಾಲಿ ಇದೆ.

ಸದರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಈ ಹಿಂದೆ ಸ್ತ್ರೀರೋಗ ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದರು. ಈ ತಜ್ಞರು ಮೇ–2013ರ ವರ್ಗಾವಣೆ ಸಮಯದಲ್ಲಿ ಕೌನ್ಸಿಲಿಂಗ್ ಕಾಯ್ದೆ ಮೇರೆಗೆ ಪತಿ–ಪತ್ನಿ ಪ್ರಕರಣದಡಿ ವರ್ಗಾವಣೆ ಹೊಂದಿರುತ್ತಾರೆ.